<u>ಸಿಸಿ ಸಂಖ್ಯೆ **-85/2022**</u> <u>ಪಿ.ಡಬ್ಲ್ಯೂ:**-1**</u>

ದಿನಾಂಕಃ **23-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-</u>

ಸಾಕ್ಷಿಗೆ ಆರೋಪಿಯು ನಮ್ಮಿಂದ ಖರೀದಿ ಮಾಡಿದ ಇಟ್ಟಿಗೆಗಳು ಸುಸ್ಥಿತಿಯಲ್ಲಿ ಇಲ್ಲ ಎಂದು ರೂ.1,35,000/- ಬೆಲೆ ಬಾಳುವ ಇಟ್ಟಿಗೆಗಳು ತಿರಸ್ಕೃತಗೊಂಡು ನಮಗೆ ವಾಪಾಸ್ಸು ಬಂದಿರುವ ಬಗ್ಗೆ ನಿಮ್ಮ ನೋಟೀಸಿನಲ್ಲಾಗಲೀ, ಪಿರ್ಯಾದುವಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿಯಿಂದ ಯಾವುದೇ ತಿರಸ್ಕೃತ ಇಟ್ಟಿಗೆಗಳು ನಮಗೆ ವಾಪಾಸ್ಸು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯಿಂದ ತಿರಸ್ಕೃತ ಇಟ್ಟಿಗೆಗಳು ಬಂದಿದ್ದರು ಸಹ ಸದರಿ ವಿಚಾರವನ್ನು ನೋಟೀಸಿನಲ್ಲಾಗಲೀ, ಪಿರ್ಯಾದುವಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಇಟ್ಟಿಗೆಗಳು ತಿರಸ್ಕೃತಗೊಂಡು ನಮಗೆ ವಾಪಾಸ್ಸು ಬಂದ ದಿನಾಂಕವಾದ 24-08-2021 ರಂದು ಆರೋಪಿಯು ನನ್ನ ಖಾತೆಗೆ ರೂ.50,000/- ಹಣವನ್ನು ಯು ಪಿ ಐ ಖಾತೆಯ ಆಧಾರದ ಮೇಲೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ನಮಗೆ ಕೇವಲ ರೂ.15,000/- ಹಣವನ್ನು ಬಾಕಿ ಇಟ್ಟಿಗೆ ಹಣವನ್ನು ಕೊಡಬೇಕೆತ್ತು ಆ ಸಮಯದಲ್ಲಿ ಇಟ್ಟಿಗೆಗಳನ್ನು ಸಾಗಾಣಿಕೆ ಮಾಡಿದ ಬಗ್ಗೆ ಸಾಗಾಣಿಕೆ ಖರ್ಚನ್ನು ಕೊಡಬೇಕೆಂದು ನಾವು ಒತ್ತಾಯ ಮಾಡಿದ್ದರಿಂದ ಆರೋಪಿಯು ರೂ.15,000/- ಗಳಿಗೆ ರೂ.10,000/- ಸೇರಿಸಿ ಒಟ್ಟು ರೂ.25,000/- ಗಳನ್ನು ನಮ್ಮ ಖಾತೆಗೆ ದಿಃ 29-08-2021 ರಂದು ಯು ಪಿ ಐ ಖಾತೆಯ ಮೂಲಕ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ದಿಃ 24-08-2021 ರಂದು ರೂ.50,000/- ಮತ್ತು ದಿಃ 29-08-2021 ರಂದು ರೂ.25,000/- ಹಣವನ್ನು ನನ್ನ ಖಾತೆಗೆ ವರ್ಗಾವಣೆ ಮಾಡಿದ ವಿಚಾರವನ್ನು ಉದ್ದೇಶಪೂರ್ವಕವಾಗಿ ನೋಟೀಸಿನಲ್ಲಾಗಲೀ, ಪಿರ್ಯಾದುವಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ-1 ಮತ್ತು

7 ಚಕ್ಕಿಗೆ ಸಂಬಂಧಪಟ್ಟಂತೆ ಸಂಪೂರ್ಣ ಹಣವನ್ನು ತಿರಸ್ಕೃತ ಇಟ್ಟಿಗೆ ಮತ್ತು ಮೇಲ್ಕಂಡ ಹಣ ವರ್ಗಾವಣೆ ಮೂಲಕ ಪಾವತಿ ಮಾಡಿದ್ದು ಆದ ಕಾರಣ ಆರೋಪಿಯು ನಿಪಿ-1 ಮತ್ತು 7 ರ ಚಕ್ಕಿನ ಯಾವುದೇ ಹಣವನ್ನು ಪಾವತಿ ಮಾಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಆರೋಪಿಯು ನಿಪಿ-1 ಮತ್ತು 7 ರ ಚಕ್ಕಿನ ಸಂಪೂರ್ಣ ಹಣವನ್ನು ಮರುಪಾವತಿ ಮಾಡಿದ ನಂತರ ಚಕ್ಕನ್ನು ವಾಪಾಸ್ಸು ನೀಡದೇ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.